ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಚಿಕ್ಕಣ್ಣನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ತನ್ನ ಸಾಲಗಾರ್ರಿಗೆ ಪಾವತಿಬಗ್ಗೆ ಮಾಹೆಯಾನಾ ತಪ್ಪದೆ ಕೋರ್ಟಿಗೆ (2) ರೂಪಾಯಿ ಹಾಜರ್ಮಾಡುವ ಷರತ್ತಿನಮೇಲೆ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನು ನಿರ್ಬಂಧದಿಂದ ವಿನೋಚನೆ ಮಾಡಿರುವವಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವಸಾಲಕ್ಕೂ ಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿರಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1894ನೇ ಇಸವಿ ಡಿಸೆಂಬರ್ 22ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ,

ನಂಬರ್.	ಲೇಣೆದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿ ಹುಟ್ಟಿದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	6ನೇ ಬೆಂಗಳೂರು ಬೆಟ್ಟಯ್ಯನ ಪೇಟೇಲಿರುವ ದೇವಾಂಗದ ಹೊನ್ನಪ್ಪ ..	52–8–0	..	ಬೆಂಗಳೂರು ಸಬ್‌ಜಡ್ಜಿಯವರ ಕೋರ್ಟ್ 1892ನೇ ಇಸವಿ ಸ್ಮಾಲ್‌ಕಾಜ್ 1005ನೇ ನಂಬರ್ ಡಿಕರಿ ಮೊಬಲಗು–ಈ ಡಿಕರಿಯು ಈ ಲೇಣೆದಾರ್ ಹೊನ್ನಪ್ಪನು ಈ ದಿವಾಳಿದಾರ್ ಚಿಕ್ಕಣ್ಣನಮೇಲೂ ಮತ್ತು ಇದ ನಂದಿದುರ್ಗ ಡಿವಿಜ್ಞ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟ್ 1894–95ನೇ ಇಸವಿ ಮಿಸ್ 116ನೇ ನಂಬರ್ ದಿವಾಳಿದಾರ್ ಚಾಂಡಪ್ಪನ ಮೇಲೂ ಸಹ ಪಡದ್ದಾಗಿ ಇರುತ್ತೆ.	

ಸ್ಯ 1895ನೇ ಇಸವಿ ಜನವರಿ 24ನೇ ತಾರೀಖಿನಲ್ಲಿ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿದೆ.

ನಂಬರ್.	ಲೇಣೇದಾರ್ರ ಹೆಸರು.	ಮೊಬಲಗು.	ಷರಾ.
1	ವೆಂಕಟರಮಣಪ್ಪ ..	60—0—0	ಪತ್ರದ ಬಾಕಿ
2	ಮರಿಯಪ್ಪ ..	60—0—0	ಡಿಕರಿ ಮೊಬಲಗು
3	ಈಶ್ವರಪ್ಪ ..	35—0—0	ತಂಸೂಕು ಬಗೆ
4	ನಂಜುಂಡಪ್ಪ ..	60—0—0	ಡಿಕರಿ ಮೊಬಲಗು
5	ರಂಗಣ್ಣ ..	50—0—0	ತಂಸೂಕು ಬಗೆ
6	ಹೊನ್ನಪ್ಪ ..	52—8—0	ಡಿಕರಿ ಮೊಬಲಗು

ಟಿ. ನರಹರರಾವ್,
ಡಿಸ್ಟ್ರಿಕ್ಟು ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಮಾರ್ಚಿ 1895ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಾರ್‌ಗಳ ಆಫಿಸ್‌ಗಳಲ್ಲಿ ಜೇವಾರಸಾಗಿರುವ ದಸ್ತಾವೇಜುಗಳನ್ನು ಹಾಜರು ಮಾಡಿದವರುಗಲಿ ಅಥವಾ ಅವರಿಂದ ಕ್ರಮವಾದ ಅಧಿಕಾರ ಪಡದುಕೊಂಡ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ಆಯಾ ಸಬ್ ರಿಜಿಸ್ಟ್ರಾರ್ ಮುಂದೆ ಹಾಜರಾಗಿ ವಾಪಸು ತೆಗದುಕೆಂಡು ಹೋಗಬಹುದು. ಇಲ್ಲವಾದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ ಪ್ರಕಾರ ಅವುಗಳನ್ನು ನಾಶಪಡಿಸಲಾಧೀತು.

ಆಫಿಸ್ ಹೆಸರು.	ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವ ಗೈರೆ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವ ಗೈರೆ.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಂಮತು.
ಚಿಂತಾಮಣಿ	23 1892—93	ಚಿಕ್ಕ ಬಳ್ಳಾಪುರದಲ್ಲಿರುವ ಸ್ಮಾರ್ತ ಬ್ರಾಹ್ಮಣ ದೇಶಕುಲಕರಣಿ ನೂರಪ್ಪನವರ ಕೊಮಾರ ಚಿತಾರಾಮಪ್ಪ	ಚಿತ್ತೂರು ಜಿಲ್ಲಾ ಪುಂಗನೂರು ತಾಲ್ಲೂಕು ಚಂಬುಕೂರುನಲ್ಲಿರುವ ಬ್ರಾಹ್ಮಣ ಭಾಸ್ಕರಪ್ಪನವರ ಕೊಮಾರ ಲಕ್ಷ್ಮೀನಾರಣಪ್ಪ	1892ನೇ ಇಸವಿ ಫಿಬ್ರವರಿ ತಾರೀಖು 6ರಲ್ಲು	1892ನೇ ಇಸವಿ ಜೂಲೈ ತಾರೀಖು 3ರಲ್ಲು ರಿಜಿಸ್ಟರ್ ಆಗಿಧೆ	999 ರೂಪಾಯಿನ ಜಮ್ಮಿ ಆಧಾರ ಪತ್ರ
ಬಾಗೇಪಲ್ಲಿ	2 1892—93	ಜೇಳೂರು ಹೋಬಳಿ ಪುತೂರು ವಾಸಸ್ಥರಾದ 1 ಗೆರಿಗೆ ಅಪ್ಪೇನು ಮಗ ಗಂಗಪ್ಪ 2 ಗೆರಿಗೆ ವೆಂಕಟಪ್ಪನಹೆಂಡತಿ ರಾಮಕ್ಕ 3 ಗೆರಿಗೆ ಸುಬ್ಬರಡ್ಡಿ ಮಗ ಅಯ್ಯಪ್ಪ 4 ವೇಮಂಣ 5 ಮದ್ದಂಣ	ಜೇಳೂರು ಹೋಬಳಿ ಕೇರುರ್ಖಾ ಕೋಟೆ ವಾಸಸ್ಥಾನದ ವಕ್ಕಲಿಗ ದೊಡ್ಡ ಬಂಟ್ರೋತನ ಮಗ ತಿಮ್ಮಣ್ಣ	1892ನೇ ಇಸವಿ ಜುಲೈ ತಾರೀಖು 7ರಲ್ಲು	ಈ ದಸ್ತೈವೆಜು ತಿರಸ್ಕರಿಸಿ ಇಧೆ 31ನೇ ಆಗಸ್ಟ್ 92ನೇ ಇಸವಿ	ಜೇಳೂರು ಹೋಬಳಿ ಕೇರುರ್ಖಾ ಕೋಟೆ ದೊಡ್ಡಕೆರೆಲಿ ಕಲ್ಲುಕಟ್ಟಿದ ಕಪಿಲೆ ಬಾವಿಯನ್ನ 65 ರೂಪಾಯಿಗೆ ಖರೀದಿ ಮಾಡಿರುವದಾಗಿ
ಗುಡಿಬಂಡೆ	28 1892—93	ಗುಡಿಬಂಡೆ ಹೋಬಳಿ ಬಿಷ್ಟಲಹಳ್ಳೀಲಿರುವ ಅಂಚೆ ಪೋತಲಯ್ಯನ ಮಗ ತಳವಾರ ನರಶಿಗ	ಚಿಕ್ಕತಮ್ಮನಹಳ್ಳಿಯಲ್ಲಿರುವ ವರದರಡ್ಡಿ ಮಗ ವಕ್ಕಲಿಗ ಗೊರ್ಲರಡ್ಡಿ	1892ನೇ ಇಸವಿ ಅಕ್ಟೋಬರ್ ತಾರೀಖು 13ರಲ್ಲು	1892ನೇ ಇಸವಿ ನವಂಬರು ತಾ|| 11ರಲ್ಲು ರಿಜಿಸ್ಟರ್ ಆಗಿಧೆ	200 ರೂಪಾಯಿನ ಭೂಸ್ಥಿತಿ ಕ್ರಯದ ದಸ್ತೈವಜ

ಅಬ್ದುಲ್‌ಅಜೀಜ್,
ಫಾರ್ ರಿಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 27ನೇ ಫಿಬ್ರವರಿ 1895.

ಬೆಂಗಳೂರು ಮುನಸಾರ್ತೆಪ್ಯಾಟೆ ವಾಸಸ್ಥನಾದ ಹಕೀಂ ಮಹಮ್ಮದ್ ಇಸೂಫ್‌ಸಾಹೆಬ್ ಎಂಬುವರೆ ನಿಕಾ ಹೆಂಡತಿಯಾದ ಇಮಾಂಬಿ ಯಂಬುವಳು 1895ನೇ ಇಸವಿ ಫೆಬ್ರವರಿ ಮಾಹೆ 17ನೇ ತಾರೀಖು ಭಾನುವಾರದ ರಾತ್ರಿ 10 ಘಂಟೆ ಮೇಲೆ ಬೆಳಗಿನ 6 ಘಂಟೆ ವಳಗಾಗಿ ಈ ಕೆಳಗೆ ನಮೂದಿಸಲ್ಪಟ್ಟ ಹುಡುಗಿಯರನ್ನು ಮತ್ತು ಸುಮಾರು ಆರುಸಾವಿರ ರೂಪಾಯಿ ಕ್ರಯಬಾಳತಕ್ಕ ಬೆಳ್ಳಿ ಭಂಗಾರದ ವಡವೆಗಳನ್ನು ನೋಟುಗಳನ್ನು ಕಳವು ಮಾಡಿಕೊಂಡು ಯಲ್ಲಿಯೋ ಹೋಗಿರುತ್ತಾಳೆಂದು ಫಿರ್ಯಾದ್ ಆಗಿರುವ ಸಂಗತಿಯಲ್ಲಿ ಪತ್ತೆ ಮಾಡುವದಕ್ಕೆ ಸರಿಯಾದ ಖಾತ್ರಿ ಕೊಟ್ಟವರಿಗೆ 300 ರೂಪಾಯಿಗಳ ಇನಾಮನ್ನು ಕೊಡಲು ಫಿರ್ಯಾದಿ ಹಕೀಂ ಮಹಮ್ಮದ್ ಇಸೂಫ್‌ಸಾಹೆಬರು ಪ್ರಿರುತ್ತಾರೆ.

1ನೇ ಇಮಾಂಬಿ ಎಂಬುವಳ ಚಹರೆಪಟ್ಟಿ.

ಮಹಮ್ಮದ ಇಸೂಫ್‌ಸಾಹೆಬರವರ 2ನೇ ನಿಕಾ ಹೆಂಡತಿ—45 ವರುಷ ವಯಸ್ಸು ಕೆಂಪು ಬಣ್ಣ ಕುಳ್ಳಗೆ ದಪ್ಪವಾಗಿದ್ದಾಳೆ ಸುಮಾರು 5 ಅಡಿ ಎತ್ತರ ಹಣೆ ಮೇಲೆ ಅವರೇಬೇಳೆ ಅಗಲ ಘಾಯದ ಗುರ್ತು ಇಧೆ. ಯಡಗಡೆ ಕಿವಿಯು ಹರದುಹೋಗಿ ಪುನಹ ಕೇರಿ ಕೊಂಡು ಮೋಟುಗಿ ಕಾಣುತ್ತೆ, ನೋಟಕ್ಕೆ ಕಮ್ಮಿ ವಯಸ್ಸಿನವಳಂತೆ ಕಾಣುತ್ತಾಳೆ ತಲೆಕೂದಲು ನರತಿಲ್ಲಾ ಕನ್ನಡ, ತೆಲುಗು, ಹಿಂದುಸ್ಥಾನಿ, ತಮಳು ಮಾತನಾಡುತ್ತಾಳೆ ಕೆಲವು ವ್ಯಾಳೆಗಳಲ್ಲಿ ಹಿಂದು ಜನಗಳ ಡ್ರೆಸ್ಸುಗಳನ್ನು ದರಿಸಿಕೊಳ್ಳುತ್ತಾಳೆ, ಈಕೆಯು ದಂಡಿನಲ್ಲಿ ಮಿಠಾಯಿ ಅಂಗಡಿ ಇಟ್ಟಿದ್ದ ಖಾದರ್‌ಸಾಬ್ ಯಂಬುವನ ಮದುವೆಯಾದ ಹೆಂಡತಿಯಾಗಿದ್ದಳು, ಈತನು ಸುಮಾರು 30 ವರುಷದ ಹಿಂದೆ ಮೃತಪಟ್ಟು ಹೋದನು, ಈತನ ನಂತರ ಹಿಂದುಸ್ಥಾನಿ ಸೈಯದ್ ಇನಾಯತ್ ಅಲ್ಲಿ ಯಂಬವನು ಇವಳನ್ನು ಯರಡು ಮೂರು ವರುಷ ಮಡಗಿಕೊಂಡಿದ್ದನು, ನಂತರ ಇವನು ಸತ್ತುಹೋದನು, ತರುವಾಯ ಹಕೀಂ ಮಹಮ್ಮದ್ ಇಸೂಫ್‌ ಸಾಹೆಬರು ನಿಕಾಮಾ